**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 444/2020**

| | | |
|---|---|---|
| ಸಾಕ್ಷಿಯ ಹೆಸರುಃ | ಪುಷ್ಪಾವತಿ | ಫ್ರಾ.ಸಾಃ 1 |
| ತಂದೆ/ಗಂಡನ ಹೆಸರುಃ | ಹಣಮಂತ | ಚಾಸಾಃ 1 |
| ವಯಸ್ಸು ಃ | 43 ವರ್ಷ | ದಿಃ 06-03-2023 |
| ಉದ್ಯೋಗಃ | ಸರಕಾರಿ ಶಾಲೆಯಲ್ಲಿ ಮುಖ್ಯ ಅಡಿಗೆಯರು | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಬಂದಳ್ಳಿ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ನನಗೆ ಚಾಸಾಃ 2 ರಿಂದ 6 ರವರ ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿದೆ. ನನ್ನ ತಂದೆ ಸಾಯಿಬಣ್ಣ ಇವರಿಗೆ ಇಬ್ಬರು ಹೆಂಡತಿಯರು ಇರುತ್ತಾರೆ. ಮೊದಲನೆ ಹೆಂಡತಿಯ ಹೆಸರು ಗಂಗಮ್ಮ ಮತ್ತು ಎರಡನೆಯ ಹೆಂಡತಿಯ ಹೆಸರು ನೀಲಮ್ಮ. ಸದರಿ ಗಂಗಮ್ಮಳಿಗೆ ಗೌರಮ್ಮ, ಸುಮಂಗಳ, ನಾಗರೆಡ್ಡಿ ಅಂತ ಮೂರು ಜನ ಮಕ್ಕಳು ಇರುತ್ತಾರೆ. ಎರಡನೆಯ ಹೆಂಡತಿಗೆ ನಾನು ಮತ್ತು ಮೋನಪ್ಪ, ರವಿಂದ್ರಕುಮಾರ, ದೇವಮ್ಮ ಅಂತ ನಾಲ್ಕು ಜನ ಮಕ್ಕಳು ಇರುತ್ತಾರೆ. ನನ್ನ ತಂದೆ ಹೆಸರಿನಲ್ಲಿ ಒಟ್ಟು 19 ಎಕರೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ನಮ್ಮ ತಂದೆಯ ಜೀವಿತಾವದಿಯಲ್ಲಿ ಮೂರು ಭಾಗ ಮಾಡಿಕೊಂಡಿದ್ದು ಇರುತ್ತದೆ. ಸದರಿ ಮೋನಪ್ಪ ಮತ್ತು ರವೀಂದ್ರ ಕುಮಾರ ಇವರ ಪಾಲಿಗೆ ಬಂದಂತ ಜಮೀನುಗಳಲ್ಲಿ ನಾನು ಸಾಗುವಳಿ ಮಾಡುತ್ತಿದ್ದೇನೆ. ನನ್ನ ತಂದೆ 2007 ರಲ್ಲಿ ಮರಣ ಹೊಂದಿರುತ್ತಾರೆ. ನಂತರ ಜಮೀನಿನ ವಿಷಯವಾಗಿ ನನಗೆ ಮತ್ತು ಆರೋಪಿತರ ನಡುವೆ ಜಗಳ ಆಗುತ್ತಿತ್ತು. ದಿನಾಂಕಃ 17-05-2020 ರಂದು ನಮ್ಮ ತಮ್ಮಂದಿರ ಹೊಲ ಉಳುಮೆ ಮಾಡಲು ಟ್ರ್ಯಾಕ್ಟರ ತಂದಾಗ ಆರೋಪಿತರು ಬಂದು ಉಳುಮೆ ಮಾಡಲು ತಕರಾರು ಮಾಡಿರುತ್ತಾರೆ. ನನ್ನ ಜೊತೆ ಜಗಳವಾಡಿ ಅವಾಚ್ಯ ಶಬ್ದಗಳಿಂದ ರಂಡಿ ಮಕ್ಕಳೇ ನಿಮಗೇನು ಹಕ್ಕು ಇದೆ ಈ ಹೊಲದಲ್ಲಿ ಅಂತ ಬೈದಿರುತ್ತಾರೆ. ಆರೋಪಿತನು ನನಗೆ ಎದೆಯ ಮೇಲಿನ ಸೆರಗು ಹಿಡಿದು ಎಳೆದು ಟ್ರ್ಯಾಕ್ಟರ ಉಳುಮೆ ಮಾಡುವ ಸ್ಥಳದಲ್ಲಿ ದಬ್ಬಿರುತ್ತಾನೆ. 2 ನೇ ಆರೋಪಿತಳು ಬಂದು ನನ್ನ ಕೂದಲು ಹಿಡಿದು ಎಳೆದಾಡಿ ನೆಲಕ್ಕೆ ಹಾಕಿ ಕೈಯಿಂದ ಹೊಡೆದಿರುತ್ತಾರೆ. ನಂತರ ಘಟನಾ ಸ್ಥಳಕ್ಕೆ ಚಾಸಾಃ 4, 5, 6 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ಒಂದು ವೇಳೆ ಹೊಲದಲ್ಲಿ ಕಾಲಿಟ್ಟರೆ ಹೊಲದಲ್ಲಿ ಖಲಾಸ ಮಾಡುತ್ತೇವೆ ಅಂತ ಜೀವ ಬೆದರಿಕೆ ಆರೋಪಿತರು ನನಗೆ

ಹಾಕಿರುತ್ತಾರೆ. ನಾನು ಜಗಳವಾದ ನಂತರ ಮನೆಗೆ ಬಂದಿರುತ್ತೇನೆ. ನಂತರ ನಾನು ನನ್ನ ತಮ್ಮಂದಿರಾದ ಮೋನಪ್ಪ ಮತ್ತು ರವಿಕುಮಾರ ಜೊತೆ ಮಾತನಾಡಿ ದಿನಾಂಕಃ 18-05-2020 ರಂದು ಸಂಜೆಃ 5 ರಿಂದ 5-30 ಗಂಟೆ ಸುಮಾರಿಗೆ ಪಿರ್ಯಾದಿಯನ್ನು ದಾಖಲಿಸಿರುತ್ತೇವೆ. ದಿನಾಂಕಃ 19-05-2020 ರಂದು ಪೋಲಿಸರು ಘಟನಾ ಸ್ಥಳಕ್ಕೆ ಬಂದಿರುತ್ತಾರೆ. ಪೋಲಿಸರು ಬರುವಾಗ ನಮ್ಮೂರಿನ ಇಬ್ಬರು-ಮೂರು ಜನರನ್ನು ಕರೆದುಕೊಂಡು ಬಂದಿರುತ್ತಾರೆ. ನಂತರ ಪೋಲಿಸರು ನಮಗೆ ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಪೋಲಿಸರು ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ದೂರು ಆಗಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿತರ ಪರ ವಕೀಲರು ಶ್ರೀ ಈ. ಸಿ ಇವರಿಂದ.</u>

ನಾನು ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಸದರಿ ಘಟನಾ ಸ್ಥಳದಿಂದ ನಾನು ಕೆಲಸ ಮಾಡುವ ಶಾಲೆಯ ಹತ್ತಿರ ಇದೆ ಎಂದರೆ ಸರಿ. ಸದರಿ ನಮ್ಮ ಜಮೀನು ಮತ್ತು ಬಸ್ ನಿಲ್ದಾಣ ಸಮೀಪ ಇದೆ ಎಂದರೆ ಸಾಕ್ಷಿಯು 1 ಕಿ.ಮೀ. ಅಂತರವಿದೆ ಎಂದು ನುಡಿಯುತ್ತಾರೆ. ಘಟನಾ ಸ್ಥಳವು ಯಾದಗಿರಿ ಮತ್ತು ಸೇಡಂ ಗೆ ಮುಖ್ಯ ರಸ್ತೆಗೆ ಹೊಂದಿಕೊಂಡು ಇದೆ ಎಂದರೆ ಸರಿ. ಸದರಿ ಮುಖ್ಯ ರಸ್ತೆಯಿಂದನೇ ಎಲ್ಲಾ ಗಾಡಿಗಳು ದನಗಳು ಹೋಗುತ್ತವೆ ಎಂದರೆ ಸರಿ. ಸನಃ 2018 ರಲ್ಲಿ 2 ನೇ ಆರೋಪಿತಳು ನನ್ನ ತಮ್ಮ ರವೀಂದ್ರಕುಮಾರ ಇವರ ವಿರುದ್ದ ಪ್ರಕರಣವನ್ನು ದಾಖಲಿಸಿರುತ್ತಾಳೆ ಎಂದರೆ ಸರಿ. ಸದರಿ 2 ನೇ ಆರೋಪಿತಳು ನನ್ನ ತಮ್ಮನ ವಿರುದ್ದ ಪ್ರಕರಣವನ್ನು ದಾಖಲಿಸಿರುವುದರಿಂದ ನಾನು 1 ನೇ ಆರೋಪಿತರ ವಿರುದ್ದ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಾನು ಮತ್ತು ನನ್ನ ತಾಯಿ ಆರೋಪಿತರ ವಿರುದ್ದ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಯಾದಗಿರಿ ಇವರಲ್ಲಿ ಅಸಲು ದಾವೆ ಸಂಖ್ಯೆಃ 45/2020 ನ್ನು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿ. ಸದರಿ ಜಮೀನು ಸರ್ವೆ ನಂಬರ 142 ಗೆ ಬಂದಳ್ಳಿ ಗ್ರಾಮದಲ್ಲಿದ್ದು ಅದಕ್ಕೆ 1 ನೇ ಆರೋಪಿತನು ಮಾಲೀಕನು ಇರುತ್ತಾನೆ ಎಂದರೆ ಸರಿ. ನಮ್ಮ ಮನೆಯಲ್ಲಿ ಪಾಲು ವಾಟನಿ ಮಾಡಿಲ್ಲ ಅಂತ ಹೇಳಿ ಅವಾಗಾವಾಗ ಜಗಳವಾಗುತ್ತದೆ ಎಂದರೆ ಸರಿ. ಸದರಿ ನನಗೆ ಜಮೀನುಗಳಲ್ಲಿ ಪಾಲು ಕೊಟ್ಟಿಲ್ಲ ಆದ್ದರಿಂದ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಮ್ಮನ ಜಮೀನಿನಲ್ಲಿ ಆರೋಪಿತರು ಉಳುಮೆ ಮಾಡಲು ನೀಡಿರುವುದಿಲ್ಲ. ಆದ್ದರಿಂದ ಪ್ರಕರಣವನ್ನು ದಾಖಲಿಸಿದ್ದೆ ಎಂದು ನುಡಿಯುತ್ತಾರೆ. ಸಾಯಿಬಣ್ಣ ಅಕ್ಕಿ ಇವರು ಸರಕಾರಿ ಶಾಲೆಯಲ್ಲಿ ಶಿಕ್ಷಕರು ಇದ್ದರು ಎಂದರೆ ಸರಿ. ಸದರಿ ಸರಕಾರಿ ಶಿಕ್ಷಕರಿಗೆ 1 ನೇ ಮದುವೆಯಾದ ನಂತರ 2 ನೇ ಮದುವೆಯಾಗಲು ಅನುಮತಿ ಇಲ್ಲ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು

ನುಡಿಯುತ್ತಾರೆ. ಸಾಯಿಬಣ್ಣ ಇವರ ಸರಕಾರದಿಂದ ಬರುವ ಪಿಂಚಣಿ ಮತ್ತು ಸರಕಾರದ ಇತರ ಸೌಲಭ್ಯ ನಮಗೆ ಕೊಟ್ಟಿಲ್ಲ ಎಂದರೆ ಸರಿ. ಸದರಿ ಜಮೀನುಗಳಲ್ಲಿ ಮೂರು ಭಾಗ ಆಗಿದ್ದರ ಬಗ್ಗೆ ಯಾವುದಾದರೂ ನೊಂದಣಿ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ದಿನಾಂಕಃ 17-05-2020 ರಂದು ರವಿವಾರ ಇತ್ತು ಎಂದರೆ ಸರಿ. ಸದರಿ ನಾನು ಮತ್ತು ಚಾಸಾಃ 5 ರವರು ಟ್ರ್ಯಾಕ್ಟರ ತೆಗೆದುಕೊಂಡು ಆರೋಪಿಯು ಬರುವುದಕ್ಕಿಂತ ಮುಂಚೆಯೇ ಜಮೀನಿಗೆ ಹೋಗಿರುತ್ತೇವೆ ಎಂದರೆ ಸರಿ. ಸದರಿ ಸಂದರ್ಭದಲ್ಲಿ ಚಾಸಾಃ 5 ರವರು ಸ್ಥಳದಲ್ಲಿ ಬಂದಿರುತ್ತಾರೆ ಎಂದರೆ ಸಾಕ್ಷಿಯು ಜಗಳವಾಡುವ ಸಮಯದಲ್ಲಿ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ರವಿವಾರ ದಿನದಂದು ಸಮಾನ ಉದ್ದೇಶದಿಂದ 1 ನೇ ಆರೋಪಿತನನ್ನು ಕೊಲ್ಲುವ ಸಲುವಾಗಿ ಜಗಳವಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸಂದರ್ಭದಲ್ಲಿ 1 ನೇ ಆರೋಪಿತನನ್ನು ಹೊಡೆದು ಟ್ರ್ಯಾಕ್ಟರ ಕೆಳಗಡೆ ನೂಕಿಸಿ ಕೊಲ್ಲುವ ಉದ್ದೇಶ ಹೊಂದಿರುತ್ತೀರಿ ಎಂದರೆ ಸರಿಯಲ್ಲ. ನಾನು 1 ನೇ ಆರೋಪಿತನಿಗೆ ಜೀವ ಬೆದರಿಕೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸದರಿ 1 ನೇ ಆರೋಪಿತನಿಗೆ ಹೊಡೆದಿರುವ ವಿಷಯ ಊರಲ್ಲಿ ಪ್ರಚಾರ ಆಗುತ್ತದೆ ಎಂದು ತಿಳಿದು ನಾನು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ 1 ನೇ ಆರೋಪಿತನು ನನಗೆ ಸೀರೆ ಹಿಡಿದು ಅವಮಾನ ಮಾಡಿ ಮಾನಭಂಗ ಮಾಡಲು ಬಂದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಂದರ್ಭದಲ್ಲಿ ಯಾವುದೇ ತಲೆಯ ಮೇಲಿನ ಕೂದಲು ಹಾನಿ ಆಗಿರುವುದಿಲ್ಲ. ಸದರಿ 1 ನೇ ಆರೋಪಿತನು ಹೊಡೆದ ನಂತರ ನನಗೆ ಗಾಯವಾಗಿರುವುದಿಲ್ಲ, ಹಾಗೂ ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ 1 ನೇ ಆರೋಪಿತನು ಕೈಯಿಂದ ಹೊಡೆದಿರುವುದರಿಂದ ಗಾಯವಾಗಿರುವುದಿಲ್ಲ. ಸದರಿ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ನ್ಯಾಯಾಲಯದಲ್ಲಿ ಅಸಲು ದಾವೆಯು ವಿಲೇವಾರಿಗೆ ಬಾಕಿ ಇರುವುದರಿಂದ ಅದನ್ನು ರಾಜಿ ಮಾಡುವ ಉದ್ದೇಶದಿಂದ ಪ್ರಸ್ತುತ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**